ಅಧ್ಯಕ್ಷರು.—ಬಿಟ್ಟು ಕೊಡಿ. ನೀವು ಏನು ಮಾತನಾಡಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ. ನೋಟೀಸ್ ಬೇಕು ಎಂದರೆ ಬೇಕು, ಕೊಡಿ.

ಶ್ರೀ ಜಿ. ಎಸ್. ಆಚಾರ್. ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ಕಡಿಮೆ ರೇಟ್‌ನಲ್ಲಿ ಒಂದು ಎಕರೆ ಲ್ಯಾಂಡನ್ನು ಅಕ್ವಿಜಿಷನ್ ಮಾಡಿಕೊಳ್ಳುವಾಗ ೫೦೦ ಅಥವಾ ಸಾವಿರ ರೂಪಾಯಿ ಕೊಡುತ್ತಾರೆ. ಜಾಸ್ತಿ ರೇಟ್ ಕೊಟ್ಟರೆ ಮುಂದೆ ಹೈಕೋರ್ಟ್ ಮಂತ್ರೊಂದರ ಕೋರ್ಟ್‌ಗೆ ಹೋಗಿ ಸ್ಟೇ ತರುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಸರಿಯಾದ ರೀತಿಯಲ್ಲಿ ಹಣವನ್ನು ಒದಗಿಸಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ನನಗೆ ಗೊತ್ತಿದೆ. ಬಹಳ ಕಡೆ ಅಕ್ವೈರ್ ಮಾಡಿಕೊಳ್ಳುವಾಗ ಕಡಿಮೆ ಬೆಲೆ ಕೊಡುತ್ತಿದ್ದಾರೆಂದು ದೂರು ಬಂದಿದೆ. ಅದು ನೀತಿಯ ವಿಚಾರ. ಅದನ್ನು ಪರಿಶೀಲಿಸುತ್ತೇವೆ.

ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ನಿವೇಶನಗಳನ್ನು ಹಂಚುವ ಬಗ್ಗೆ.

೩೨೩. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ). ಮಾನ್ಯ ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧. ಸರ್ಕಾರದವರು ಎಷ್ಟು ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ನಿವೇಶನ ರಚಿಸಲು ಅನುಮತಿ ಕೊಟ್ಟಿದೆ?

೨. ನಿಗಧಿತವಾದ ಸರ್ಕಾರದ ಅನುಮತಿಯಿಲ್ಲದೆ ಕೆಲವಿನ್ಕ್ ನಿವೇಶನ ಮಾಲೀಕರಿಂದ ನಿವೇಶನವನ್ನು ಮಾಡಲಾಗಿದೆಯೇ?

೩. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ರಚಿಸಿರುವ ಬಗ್ಗೆ?

೪. ಭೂಸ್ವಾಧೀನತೆಯಲ್ಲಿರುವ ಈಗಿನ ಭೂಮಿಯು ನಿಸ್ತೀರ್ಣ?

ಅ. ಸರ್ಕಾರವು ಗೃಹನಿರ್ಮಾಣ ಸಂಘಗಳಿಗೆ ಅನುಮತಿ ನೀಡಿರುವ ಬಗ್ಗೆ?

ಆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪಡಿಯಲ್ಲಿ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

೧. ೧೯೮೩ರಿಂದ ೨೮ ಗೃಹ ನಿರ್ಮಾಣ ಸಂಘಗಳಿಗೆ ಸುಮಾರು ೮೭೧೬ ನಿವೇಶನಗಳನ್ನು ರಚಿಸಲು ಅನುಮತಿ ನೀಡಿದೆ.

೨. ವಿವರವಾದ ಸರ್ವೆ ಕೆಲಸವನ್ನು ತೆಗೆದುಕೊಂಡು ಅದು ಮುಂದುವರಿಯುತ್ತಿದೆ.

೩. ೪೧೨೫೫ ನಿವೇಶನಗಳನ್ನು ರಚಿಸಿದೆ.

೪. ಅ. ೮, ೮೩೧ ಎಕರೆ ೨೧೪ ಗುಂಟೆ.

ಆ. ೯, ೬೫೩ ಎಕರೆ ೨೪ ಗುಂಟೆ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಯೋಜನೆ ವ್ಯಾಪ್ತಿಗೆ).

ಶ್ರೀ ಬಿ. ಬಸವಲಿಂಗಪ್ಪ.—ಇವರ ಉತ್ತರ ಸಮರ್ಪಕವಾಗಿಲ್ಲ. ಮೊದಲನೇ ಪ್ರಶ್ನೆಗೆ ೧೯೮೩ರಿಂದ ೨೮ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ೮೭೧೬ ನಿವೇಶನ ರಚಿಸಲು ಅನುಮತಿ ಕೊಡಲಾಗಿದೆ ಎಂದು ಹೇಳಿದ್ದಾರೆ. ೧೯೮೩ಕ್ಕಿಂತ ಹಿಂದೆ ಎಷ್ಟು ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಪರವಾನಗಿ ಕೊಟ್ಟಿದ್ದೀರಿ? ಸರ್ಕಾರದ ಅನುಮತಿ ಇಲ್ಲದೆ ಅವರು ಎಷ್ಟು ನಿವೇಶನಗಳನ್ನು ಮಾಡಿದ್ದಾರೆ? ಮತ್ತು ಅನುಮತಿ ಮೇಲೆ ಎಷ್ಟು ಮಾಡಿದ್ದಾರೆ?

ಶ್ರೀ ಎ. ಲಕ್ಷ್ಮೀಸಾಗರ್.—ಹಿಂದೆ ಎಷ್ಟು ಕೊಟ್ಟರು ಎಂದರೆ ಆಗ ನಾವು ಅಧಿಕಾರದಲ್ಲಿ ಇರಲಿಲ್ಲ. ೧೯೮೩ಕ್ಕಿಂತ ಹಿಂದೆ ಎಷ್ಟು ಸೊಸೈಟಿಗಳಿಗೆ ಕೊಟ್ಟಿದ್ದೀರಿ ಎಂಬುದಕ್ಕೆ ಮಾಹಿತಿ ಈಗ ನನ್ನ ಪೆತ್ತಿರ ಇಲ್ಲ. ಬೇಕಾದರೆ ವಿವರವನ್ನು ತಗೆದುಕೊಡುತ್ತೇನೆ.

ಶ್ರೀ ಬಿ ಬಸವಲಿಂಗಪ್ಪ.—ಸರ್ಕಾರದ ನಿಗದಿತ ಅನುಮತಿ ಇಲ್ಲದೆ ನಿವೇಶನಗಳನ್ನು ಮಾಡಲಾಗಿದೆಯೇ ಎಂದರೆ, ವಿವರವಾದ ಸರ್ವೆ ಕೆಲಸ ತೆಗೆದುಕೊಂಡು ಅದು ಮುಂದುವರಿಯುತ್ತಿದೆ ಎಂದು ಉತ್ತರಿಸುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ಹೇಳುವಾಗ ಮಾಡಲಾಗಿದೆ ಎಂದು ಹೇಳಿದ್ದೇನೆ. ಅದು ಆದರಲ್ಲಿ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಎಷ್ಟು ನಿವೇಶನ ಮಾಡಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ರೆವಿನ್ಯೂ ಲ್ಯಾಂಡ್‌ನಲ್ಲಿ ಅನಧಿಕೃತ ನಿವೇಶನಗಳು ಬಂದಿವೆ. ಎಷ್ಟು ಕಡೆ ಎಷ್ಟು ನಿವೇಶನಗಳು ಬಂದಿವೆ ಎಂಬುದರ ಬಗ್ಗೆ ಸರ್ವೆ ಮಾಡಿಸುತ್ತಿದ್ದೇವೆ. ಆ ವಿವರ ಸರ್ವೆ ಕೆಲಸ ಮುಗಿದ ನಂತರ ಗೊತ್ತಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಬೆಂಗಳೂರು ಸಿಟಿ ಸುತ್ತಮುತ್ತ ಇರತಕ್ಕ ಜಮೀನು ಮಾಲೀಕರು ಸ್ವೇಚ್ಛೆಯಾಗಿ ಸೈಟುಗಳನ್ನು ಮಾಡಿ ಮಾರಿ ಮನೆಗಳನ್ನು ಕಟ್ಟಿದ್ದಾರೆ. ಅವು ಸುಮಾರು ೬೦–೭೦ ಸಾವಿರ ನಿವೇಶನಗಳಾಗಿವೆ. ಹಾಗಾದರೆ ಪ್ರಾಧಿಕಾರದ ಕರ್ತವ್ಯ ಏನು ? ಇದಕ್ಕೆ ಉತ್ತರಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಹಾಗೆ ಆಗಿರುವುದು ನಿಜ. ಅದನ್ನು ನಾನು ಒಪ್ಪುತ್ತೇನೆ. ಆದರೆ ಇದರ ಸಂಖ್ಯೆ ಎಷ್ಟು, ಎಷ್ಟು ವಿಸ್ತೀರ್ಣದಲ್ಲಿ ಬಂದಿವೆ, ಎಂಬುದರ ಬಗ್ಗೆ ಸರ್ವೆ ಮಾಡಿಸುತ್ತಿದ್ದೇವೆ. ಸರ್ವೆ ನಂತರ ಅದನ್ನು ಸಕ್ರಮಗೊಳಿಸತಕ್ಕ ಗುರಿಯನ್ನು ಸರ್ಕಾರ ಗವನಮೆಂಟಲ್ಲಿಟ್ಟುಕೊಂಡು ಅವುಗಳನ್ನು ಯಾವ ರೀತಿ ಸಕ್ರಮಗೊಳಿಸಬೇಕೆಂಬುದರ ಬಗ್ಗೆ ೩ ಜನ ಅಧಿಕಾರಿಗಳ ಒಂದು ಸಮಿತಿಯನ್ನು ಸರ್ಕಾರ ರಚನೆ ಮಾಡಿದೆ. ಅದರಲ್ಲಿ ಅಡಿಷನಲ್ ಚೀಫ್ ಸೆಕ್ರೆಟರಿಯವರು ಅಧ್ಯಕ್ಷರಾಗಿದ್ದಾರೆ. ಅವರಿಂದ ವರದಿ ಬಂದ ತಕ್ಷಣ ಅನಧಿಕೃತವಾಗಿ ಬಂದಿರತಕ್ಕ ನಿವೇಶನದವರಿಗೆ ಸಹಾಯ ಮಾಡತಕ್ಕ ದೃಷ್ಟಿಯಲ್ಲಿ ಕೆಲಸ ಕಾರ್ಯಗಳನ್ನು ಕೈಗೊಳ್ಳುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—೩ ಜನ ಸಮಿತಿಯವರು ಇದ್ದಾರೆ, ಕ್ರಮ ಕೈಗೊಳ್ಳುತ್ತೇವೆಂದು ಹೇಳುತ್ತಿದ್ದೀರಿ. ರೆವಿನ್ಯೂ ಸೈಟುಗಳು ಎನಿವೆ ಅವು ೭೦–೮೦ ಸಾವಿರ ಆಗಿವೆ, ಅವರಿಂದ ಏನಾದರೂ ಡೆವಲಪ್‌ಮೆಂಟ್ ಚಾರ್ಜಸ್ ಕಲೆಕ್ಟ್ ಮಾಡಿ ಪ್ರಾಧಿಕಾರ ರೆಗ್ಯುಲರೈಸ್ ಮಾಡುವುದಕ್ಕೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಅದೇ ಉದ್ದೇಶದಿಂದ ಯಾವ ರೀತಿ ಸಕ್ರಮಗೊಳಿಸಬೇಕೆಂದು ವಿಚಾರ ಮಾಡಿ, ಸಕ್ರಮಗೊಳಿಸಬೇಕಾದರೆ ಊರಿನ ನೀಲಿ ನಕ್ಷೆಯನ್ನು ಇಟ್ಟುಕೊಂಡು ರಸ್ತೆ, ಚರಂತಿ ಹೇಗಿರಬೇಕು, ಪೌರ ಸೌಲಭ್ಯಗಳಿಗೆ ಎಷ್ಟು ನಿವೇಶನಗಳು ಮೀಸಲಿರಬೇಕು ಎಂಬುದನ್ನೆಲ್ಲ ಗವನಮೆಂಟಲ್ಲಿಟ್ಟುಕೊಂಡು ನಿಯಮಾವಳಿಗೆ ಅನುಗುಣವಾಗಿ ಸಕ್ರಮಗೊಳಿಸತಕ್ಕ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಆ ಕೆಲಸ ಮಾಡಿಕೊಡುವುದಕ್ಕೆ ಸಮಿತಿ ಮಾಡಿದ್ದೇವೆಂದು ಹೇಳಿದ್ದೇನೆ. ಅಭಿವೃದ್ಧಿ ಶುಲ್ಕವನ್ನು ಅವರಿಂದ ಕಡ್ಡಾಯವಾಗಿ ತೆಗೆದುಕೊಳ್ಳಲೇಬೇಕಾಗಿರುವುದರಿಂದ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—೪೧ ಸಾವಿರ ಸೈಟುಗಳನ್ನು ಪ್ರಾಧಿಕಾರ ಮಾಡಿದೆ ಎಂದು ಹೇಳುತ್ತಾರೆ. ೪೧ ಸಾವಿರ ಸೈಟುಗಳನ್ನು ಯಾವ ಯಾವ ಕ್ಯಾಟಗರಿಗಳಿಗೆ ಹಂಚಲಾಗಿದೆ ಎಂಬ ವಿವರ ಕೊಟ್ಟಿಲ್ಲ. ಅದನ್ನು ಕೊಡುತ್ತೀರಾ ? ಭೂಸ್ವಾಧೀನದಲ್ಲಿರುವ ಈಗಿನ ಭೂವಿಯ ವಿಸ್ತೀರ್ಣ ಎಂಬುದಕ್ಕೆ ಸರ್ಕಾರವು ಗೃಹನಿರ್ಮಾಣ ಸಂಘಗಳಿಗೆ ಅನುಮತಿ ನೀಡಿರುವುದಕ್ಕೆ ೮೮೩೦ ಎಕರೆ ೨೧½ ಗುಂಟೆ ಎಂದು ಹೇಳಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ೯೬೫೩ ಎಕರೆ ೨½ ಗುಂಟೆ ಮಾತ್ರ ಅಕ್ವೈರ್ ಮಾಡಿದ್ದಾರೆ. ಅಂದರೆ ಸಹಕಾರ ಸಂಘಗಳು ಬಿ.ಡಿ.ಎ.ಗೆ ಪ್ಯಾರಲಲ್ ಆಗಿವೆ. ಸಹಕಾರ ಸಂಘಗಳಿಗೆ ೮ ಸಾವಿರ ಎಕರೆ ಕೊಟ್ಟಿದ್ದರೆ ಬಿಡಿಎ ಅಕ್ವೈರ್ ಮಾಡಿರುವುದು ೯ ಸಾವಿರ ಎಕರೆ. ಇದು ಪ್ಯಾರಲಲ್ ಅಫಾರಿಟಿ ಆಗಂವುದಿಲ್ಲವೆ ? ಇದರಿಂದ ಜನರಿಗೆ ಅನಾನುಕೂಲವಾಗುವುದಿಲ್ಲವೆ ? ಕೆಲವೇ ಜನ ಸಂಘದ ಹೆಸರಿನಲ್ಲಿ ಸ್ವೇಚ್ಛೆಯಾಗಿ ಸೈಟುಗಳನ್ನು ತೆಗೆದುಕೊಂಡು ಮಾರಾಟ ಮಾಡಿ ದುರುಪಯೋಗ ಮಾಡಿ ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡುವುದಕ್ಕೆ ಅವಕಾಶ ಇಲ್ಲವೆ ? ಸಹಕಾರ ಸಂಘಗಳಿಗೆ ನೀವು ಅನುಮತಿ ಕೊಡತಕ್ಕದ್ದು...

ಅಧ್ಯಕ್ಷರು.—ಇದು ಅರ್ಧ ಗಂಟೆ ಚರ್ಚೆ ಎಂದು ತಿಳಿದು ಪ್ರಶ್ನೆ ಕೇಳುತ್ತಿದ್ದೀರಾ ? ನಿಮಗೆ ಈಗಾಗಲೇ ೪-೬ ಅವಕಾಶಗಳನ್ನು ಕೊಟ್ಟಿದ್ದೇನೆ. ಬೇಗ ಕೇಳಿ ಮುಂಗಿಸಿ.

ಶ್ರೀ ಬಿ. ಬಸವಲಿಂಗಪ್ಪ.—ಸರ್ಕಾರದವರು ಸಂಘಗಳಿಂದ ಹಣ ವಸೂಲ್ಮಾಡಿ ಪರ್ಸೆಂಟೇಜ್ ಕೊಡುತ್ತಾರೆಂದು ಜನ ಹೇಳುತ್ತಾರೆ. ಎಷ್ಟು ವಸೂಲ್ಮಾಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್. ಸಹಕಾರ ಸಂಘಗಳಿಂದ ಯಾವ ವಿಧವಾದಂಥ ದೇಣಿಗೆ ಸರ್ಕಾರಕ್ಕೆ ಬಂದಿಲ್ಲ. ಇದು ನಿರಾಧಾರವಾದಂಥ ಒಂದು ಆಪಾದನೆ. ಸತ್ಯಕ್ಕೆ ಸಾವಿರಾರು ಮೈಲುಗಳ ಅಂತರದಲ್ಲಿ ಲೆಕ್ಕವಿಲ್ಲದಷ್ಟು ದೂರದಲ್ಲಿದೆ. ಇದು ಸನ್ಮಾನ್ಯ ಬಸವಲಿಂಗಪ್ಪನವರ ಕಲ್ಪನಾಲೋಕದ ಒಂದು ಲಹರಿಯ ಒಂದು ಸಣ್ಣ ಕಿಡಿ ಎಂದು ಭಾವಿಸಿದ್ದೇನೆ. ಹೇಗೆ ಹಂಚಿದ್ದೇವೆಂದು ಪ್ರಾರಂಭದಲ್ಲಿ ಹೇಳಿದ್ದೇವೆ. ಅಲಾಟ್‌ಮೆಂಟ್ ರೂಲ್ಸ್ ಪ್ರಕಾರ ಈ ರೀತಿಯಾಗಿ ನಾವು ಹಂಚಿದ್ದೇವೆ.

Backward Tribes 2%, STs 3%, SCs 13%, Ex-Serviceman, armed force 5%, State Govt. Employees 10%, Employees of the Central Government, Public Sector Undertakings, Statutory bodies owned or controlled by the State Govt. or Central Government 8%, Physically handicapped 2%, General Public 52%. To be allotted at the discretion of the Authorities, awards being given to persons who have rendered outstanding achievement in the field of Arts, Science or Sports or in any other field 5%.

ಅಧ್ಯಕ್ಷರು.—ಶ್ರೀಮತಿ ಲೀಲಾದೇವಿ ಆರ್, ಪ್ರಸಾದ್ ಸದಸ್ಯರು ಹಾಜರಿರಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ.....

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ. ಬಸವಲಿಂಗಪ್ಪನವರೇ ತಾವು ಹಿರಿಯರು. ತಮಗೆ ೫ ಸಾರಿ ಕೇಳಲು ಅವಕಾಶ ಕೊಟ್ಟಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಒಂದೇ ಒಂದು ಪ್ರಶ್ನೆ ಕೇಳಿ ಬಿಡುತ್ತೇನೆ.

ಅಧ್ಯಕ್ಷರು.—ಅರ್ಧ ಗಂಟೆ ಚರ್ಚೆಗೆ ಬೇಕಾದರೆ ಹಾಕಿ. ನಾನು ಅಲೋ ಮಾಡುತ್ತೇನೆ. ನಿಮಗೆ ಪ್ರಶ್ನೋತ್ತರ ವೇಳೆ ಮುಗಿದಿದ್ದರೂ ಅವಕಾಶ ಕೊಟ್ಟಿದ್ದೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ,...

ಅಧ್ಯಕ್ಷರು.—ಈ ಪ್ರಶ್ನೆಗೆ ನಾಲ್ಕು ಸಾರಿ ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ಬೇಕಾದರೆ ಅರ್ಧ ಗಂಟೆ ಚರ್ಚೆಗೆ ಹಾಕಿ. ನಾನು ಅಲೋ ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ ೧೮೭೩ನೇ ಪ್ರಶ್ನೆ ಸನ್ನದು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ತಾವು ಈ ಕಡೆ ಗವನ ಕೊಡಬೇಕಾಗುತ್ತದೆ. ನಾನು ನಾಲ್ಕಾರು ಸಾರಿ ತಮ್ಮ ಗಮನವನ್ನು ಸೆಳೆದಿದ್ದೇನೆ. ತಾವು ತಿರುಗಿ ಕೂಡಾ ನೋಡುತ್ತಿಲ್ಲ.

ಅಧ್ಯಕ್ಷರು.—ತಾವು ಕೂಡಿ. ಎಲ್ಲರೂ ದಯವಿಟ್ಟು ಕೂಡಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾವುಕ್ಷಿತಕ್ಕೆ ಇರಬೇಕು ಇಲ್ಲಿ ? ನಮಗೆ ಪ್ರಶ್ನೆ ಕೇಳುವುದಕ್ಕೆ ಹಕ್ಕು ಇಲ್ಲವೇ ?

(ಗೊಂದಲ)

SRI S. BANGARAPPA.—It is our right. We would like to exercise our right.

ಅಧ್ಯಕ್ಷರು.—ರೈಟ್ ಎಲ್ಲರಿಗೂ ಇದೆ. ಆದರೆ it should not be misused.

(ಗೊಂದಲ)

SRI S. BANGARAPPA.—You should also not misuse your powers. I have been seeing this very often.

ಅಧ್ಯಕ್ಷರು.—ಸರ್ಕಾರದವರು ಏನು ಹೇಳುತ್ತಾರೋ ಕೇಳಿ. ಬಸವಲಿಂಗಪ್ಪನವರಿಗೆ ನಾನು ಅರ್ಧ ಗಂಟೆ ಚರ್ಚೆಗೆ ನೋಟೀಸ್ ಕಳುಹಿಸಿಕೊಡಿ, ಅದನ್ನು ಆಲೋ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮನಸ್ಸಿಗೆ ಬಂದ ಹಾಗೆ ಮಾಡಿದರೆ ನಡೆಯುತ್ತದೆಯೇ ? I have not come here just to sit.....

ಅಧ್ಯಕ್ಷರು.—ಬಂಗಾರಪ್ಪನವರೇ, ಅವರಿಗೆ ಅವಕಾಶ ಕೊಟ್ಟಿದ್ದೇನೆ, ೪ ನಾಂ ಕೊಟ್ಟಿದ್ದೇನೆ. ಅರ್ಧ ಗಂಟೆ ಚರ್ಚೆಗೆ ನೋಟೀಸ್ ಕಳುಹಿಸಲಿ.

(ಗೊಂದಲ)

ಶ್ರೀ ಧರ್ಮಸಿಂಗ್.—ಪ್ರಶ್ನೆಯನ್ನು ಕೇಳುವುದಕ್ಕೆ ಸದನದ ಎಲ್ಲಾ ಸದಸ್ಯರಿಗೂ ಕೂಡ ಹಕ್ಕಿ ಇರುತ್ತದೆ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಬಂಗಾರಪ್ಪನವರ ಮಾತು ಅತೀ ಆಯಿತು. ಇದು ಗೌರವ ತರತಕ್ಕಂಥ ಮಾತಲ್ಲ.

(ಗೊಂದಲ)

ಅಧ್ಯಕ್ಷರು— ತಾವು ಕೂಡ್ರಿ. ಎಲ್ಲರೂ ದಯವಿಟ್ಟು ಕೂಡ್ರಿ.

ಶ್ರೀ ಎಸ್. ಬಂಗಾರಪ್ಪ— ಮನಸ್ಸಿಗೆ ಬಂದ ಹಾಗೆ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು— ಅವಕಾಶ ಬೇಕಾದಷ್ಟು ಸಲ ಕೊಟ್ಟಿದ್ದೇನೆ, ಬೇಕಾದರೆ ಕೇಳಿ.

ಶ್ರೀ ಜಿ. ನಾರಾಯಣಕುಮಾರ್— ನಿಮ್ಮ ಸರ್ವಾಧಿಕಾರವನ್ನು ಬೇರೆ ಕಡೆಇಟ್ಟುಕೊಳ್ಳಿ.

(ಗೊಂದಲ)

ಅಧ್ಯಕ್ಷರು— ನಾರಾಯಣಕುಮಾರ್‌ರವರೇ, ತಾವು ದಯವಿಟ್ಟು ಕೂಡ್ರಿ. ಬೊಮ್ಮಾಯಿ ಯವರು ಏನು ಹೇಳುತ್ತಾರೋ ಕೇಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ— ಒಂದೇ ಒಂದು ವಿಚಾರ...

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್— ಸಭಾಧ್ಯಕ್ಷರನ್ನು ಎದುರಿಸತಕ್ಕಂಥದ್ದು ಸರಿಯಲ್ಲ. ಜನತೆ ಆರಿಸಿರುವ ಜನತಾ ಸರ್ಕಾರವಿರುವಾಗ ಇಲ್ಲಿ ಅದು ನಡೆಯುವುದಿಲ್ಲ.

(ಗೊಂದಲ)

ಅಧ್ಯಕ್ಷರು — ಯಾವುದೂ ಕಡತಕ್ಕೆ ಹೋಗುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ— ಅಧ್ಯಕ್ಷರೇ...

(ಗೊಂದಲ)

ಅಧ್ಯಕ್ಷರು— ನಾರಾಯಣಕುಮಾರ್‌ರವರೇ ಕೂಡ್ರಿ. ಅವರು ಏನು ಹೇಳುತ್ತಾರೋ ಹೇಳಲಿ.

ಶ್ರೀ ಎಸ್. ಬಂಗಾರಪ್ಪ— ರಮೇಶ್‌ಕುಮಾರ್‌ರವರನ್ನು ಎಬ್ಬಿಸಿ ನಾರಾಯಣಕುಮಾರ್‌ರವರನ್ನು ಕೂಡಿಸಿದರೆ ಎಲ್ಲಾ ಸರಿ ಹೋಗುತ್ತದೆ.

ಶ್ರೀ ಜಿ. ನಾರಾಯಣಕುಮಾರ್— ನಾನು ಏನು ಸಣ್ಣ ವಯಸ್ಸಲ್ಲ.

ಶ್ರೀ ಎಸ್. ಬಂಗಾರಪ್ಪ— ಮಾನ್ಯ ಸಭಾಧ್ಯಕ್ಷರೇ, ತಮಗೆ ಗೌರವ ಕೊಡತಕ್ಕಂಥ ದೃಷ್ಟಿಯಿಂದ ನಾಲ್ಕು ಸಾರಿ ಎದ್ದಿದ್ದೇನೆ. ದಯವಿಟ್ಟು ಪೂರ್ತಿ ಕೇಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ— ಕ್ಷಮಿಸಬೇಕು... ಮಾನ್ಯ ಸಭಾಧ್ಯಕ್ಷರೇ, ಸದಸ್ಯರು ಒಂದು ಪ್ರಶ್ನೆ ಹಾಕಿದ ಮೇಲೆ ತಮಗೂ ಅನುಭವ ಇದೆ, ನವಂಗೂ ಅನುಭವ ಇದೆ. ಉಪ ಪ್ರಶ್ನೆ ಕೇಳತಕ್ಕಂಥದ್ದು ಮಾನ್ಯ ಸದಸ್ಯರಿಗೆ ಇರತಕ್ಕಂಥ ಹಕ್ಕು. ಎಲ್ಲಾ ಸದಸ್ಯರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ ಎಂದು ನನಗೂ ಕೂಡಾ ಗೊತ್ತಿದೆ. ಪ್ರಶ್ನೋತ್ತರ ವೇಳೆ ಮುಗಿದಿದೆ. ಬೇರೆ ಸದನದ ಕಾರ್ಯಕಲಾಪಗಳು ಇವೆ ಎಂಬ ವಿಚಾರದ ಎಚ್ಚರಿಕೆಯ ಹಿನ್ನೆಲೆಯಲ್ಲಿ ನಾವು ಕೂಡಾ ಪ್ರಯತ್ನಪಡಬೇಕಾಗುತ್ತದೆ. ನಿಮ್ಮ ಗಮನ ಬೇಳಲಿ ಎಂದು ನಾವು ಪ್ರಯತ್ನಪಡುತ್ತೇನೆ. ತಾವು ಆ ಕಡೆ ಮುತ್ತು ನಮ್ಮ ಕಡೆಗೆ ಎರಡು ಕಡೆಗೂ ನೋಡಬೇಕು. ಆ ಕಡೆ ಮುತ್ತು ಈ ಕಡೆಯೂ ಸದಸ್ಯರು ಇರುತ್ತಾರೆ. ನಾನು ನಾಲ್ಕು ಸಾರಿ ಎದ್ದಿದ್ದೆ.

ನಾನು ಒಂದು ಉಪ ಪ್ರಶ್ನೆ ಕೇಳುವ ಪ್ರಯತ್ನ ಮಾಡಿದೆ. ಬಹಳ ಟೈಮಾಗಿದೆ ಎಂದು ನಮಗೆ ಹೇಳಿಬಿಟ್ಟಿದ್ದರೆ ಸಂಯಮ್ಮನ್ನಕುಳಿತುಕೊಂಡು ಬಿಡುತ್ತಿದ್ದೆ ನಾನು. ಮಾನ್ಯ ಸಭಾಧ್ಯಕ್ಷರೇ ಎಂದು ಮೈಕ್‌ನಲ್ಲಿ ಹೇಳಿರುವ ಶಬ್ದಗಳು ರೆಕಾರ್ಡ್ ಆಗಿವೆ. ಮೂರು ಸಾರಿ ಹೇಳಿ ನಾಲ್ಕನೆ ಸಾರಿ ಹೇಳಿದರೂ ತಿರುಗಿನೋಡುವುದಿಲ್ಲ ಎಂದು ಹೇಳಿದರೆ, ಯಾರು ಪ್ರಶ್ನೆ ಹಾಕಿದ್ದಾರೆ ಅವರಿಗೇ ಕ್ಲೋಸ್ ಮಾಡುತ್ತೇವೆ ಎಂಬ ತೀರ್ಮಾನಕ್ಕೆ ತಾವು ಬರುವುದಾದರೆ ಸದಸ್ಯರ ಹಕ್ಕಿನ ಪ್ರಶ್ನೆ ಏನಾಗುತ್ತದೆ ಎಂಬುದು ನಮ್ಮ ಮುಂದಿರುವ ಪ್ರಶ್ನೆ. ನಾವು ಏರಿದ ಧ್ವನಿಯಲ್ಲಿ ಹೇಳತಕ್ಕ ಸಂದರ್ಭವನ್ನು ಕೆಲವು ಸಾರಿ ತಾವೇ ನಿರ್ಮಾಣ ಮಾಡುತ್ತೀರಿ ಎಂಬ ಭಾವನೆ ನಮಗೆ ಬರುತ್ತದೆ. ಅದು ಬಾರದೇ ಇರಬೇಕು, ಸರಿಯಾಗಿ ಸದನವನ್ನು ತಾವು ನಡೆಸಬೇಕು. ಇದು ನಮ್ಮ ಅಭಿಪ್ರಾಯ. ಅದಕ್ಕೆ ನಮ್ಮ ಸಹಕಾರ ಕೂಡ ಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ ನಾವು ಪ್ರಯತ್ನ ಮಾಡುತ್ತೇವೆ. ಆ ಕಡೆ ಈ ಕಡೆ ನೋಡತಕ್ಕ ಒಂದು ಪದ್ಧತಿ ನಿಮಗಿದ್ದರೆ ಎಲ್ಲರಿಗೂ ಉಚಿತ. ತಮಗೆ ಏನು ಸಹಕಾರ ಕೊಡಬೇಕೋ ಅದನ್ನು ನಾವು ಕೊಡುತ್ತೇವೆ. ಕೇಳುವುದು ಬೇಕಾದಷ್ಟಿರುತ್ತದೆ. ಬೇಡ ಎಂದರೆ ಬೇಡ. ಪ್ರಶ್ನೆ ಕೇಳದೇ ಇದ್ದರೂ ನಮ್ಮ ಕಡೆ ಗಮನ ಇರಲಿ.

ಅಧ್ಯಕ್ಷರು— ಇಲ್ಲಿ ಕೇಳಿ...

ಶ್ರೀ ಎಸ್. ಆರ್. ಬೊಮ್ಮಾಯಿ— ಪ್ರಶ್ನೋತ್ತರ ಕಾಲದಲ್ಲಿ ಪ್ರಶ್ನೆ ಕೇಳಿದವರು ಉಪಪ್ರಶ್ನೆ ಕೇಳತಕ್ಕದ್ದು ಮತ್ತು ಒಬ್ಬಿಬ್ಬ ಸದಸ್ಯರಿಗೆ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಡತಕ್ಕದ್ದು ಪರಂಪರೆ ಇದೆ. ಅದು ಅಪೇಕ್ಷಣೀಯವೂ ಇದೆ. ಆದರೆ ಪ್ರಶ್ನೋತ್ತರ ಕಾಲದಲ್ಲಿ ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕಾಗಲೀ, ಚರ್ಚೆ ಮಾಡತಕ್ಕದ್ದಾಗಲೀ ಎಲ್ಲೂ ನೋಡಿಲ್ಲ. ನಾನು ಒಂದು ವಿಚಾರ ಹೇಳುತ್ತಿದ್ದೇನೆ. ಒಂದು ವೇಳೆ ಅಧ್ಯಕ್ಷರು ಅವಕಾಶ ಮಾಡಿಕೊಡದೇ ಇದ್ದರೆ ಪ್ರಶ್ನೋತ್ತರ ಕಾಲ ಮುಗಿದ ಮೇಲೆ ನಿವೇದನೆ ಮಾಡಬಹುದು. ವಿಧಾನಪರಿಷತ್ತಿನ ಅಸೆಂಬ್ಲಿ ಇರಬಹುದು ಲೋಕಸಭೆ ಇರಬಹುದು. ಅಲ್ಲೆಲ್ಲಾ ಪ್ರಶ್ನೋತ್ತರ ಕಾಲ ಒಂದು ನಿಮಿಷ ಕೂಡ ಮುಂದುವರೆಯುವುದಿಲ್ಲ. ಎಲ್ಲ ಪ್ರಶ್ನೆಗೂ ಉತ್ತರ ಸಿಗತಕ್ಕ ವ್ಯವಸ್ಥೆಯನ್ನು ಒಪ್ಪಿಕೊಳ್ಳಬೇಕಾಗಿದೆ. ಸಭಾಪತಿಗಳು ಆ ಕಡೆ ಈ ಕಡೆ ನೋಡಬೇಕು, ಕೆಲವು ಸಾರಿ ಒಂದು ಪ್ರಶ್ನೆಗೆ ಕಡಿಮೆ ಕಾಲ ಕೊಡಬಹುದು ಅಥವಾ ಜಾಸ್ತಿ ಕಾಲ ಕೆಲವು ಸಾರಿ ಕೊಡಬಹುದು. ಆದರೆ ಒಂದು ಗಂಟೆಗಿಂತ ಜಾಸ್ತಿ ಹೋಗುವುದಿಲ್ಲ.

ಶ್ರೀ ಗೋಪಾಲ ಮಂಕಾಂದ ಕಾನಡೆ— ಉತ್ತರ ಸರಿಯಾಗಿ ಕೊಟ್ಟರೆ ನಾವು ಮಾತನಾಡುವುದಿಲ್ಲ.

(ಗೊಂದಲ)

ಅಧ್ಯಕ್ಷರು— ಎಲ್ಲರೂ ಎದ್ದು ವಾತನಾಡಿದರೆ ಏನು? ಪಿನ್ ಡ್ರಾಪ್ ಸೈಲೆನ್ಸ್ ಇರಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ— ನಾನು ಹೇಳುತ್ತಿದ್ದೇನೆ. ನಡುವೆ ಅವರು ಎದ್ದರು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ— ನಾವು ಓದಿಕೊಂಡು ಬಂದಿಲ್ಲವೇ?

ಶ್ರೀ ಎಸ್. ಆರ್. ಬೊಮ್ಮಾಯಿ— ನೀವು ಓದಿಕೊಂಡು ಬಂದಿದ್ದೀರಮ್ಮ. ಆದರೆ ತಾವೂ ಸಹ ಇಲ್ಲಿ ನಡೆಯುತ್ತಾ ಇರುವುದನ್ನು ನೋಡುತ್ತಾ ಇದ್ದೀರಲ್ಲಾ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ— ಉತ್ತರ ಕೊಡದಿದ್ದರೆ ಹೇಗೆ?

ಶ್ರೀ ಎಸ್. ಆರ್. ಬೊಮ್ಮಾಯಿ— ಪ್ರಶ್ನೆಗೆ ಉತ್ತರ ಕೊಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ— ೮-೧೦ ದಿವಸದ ಅಸೆಂಬ್ಲಿ ಇದು. ಆಗ ಕೊಡುತ್ತೇವೆ. ಈಗ ಕೊಡುತ್ತೇವೆ. ಇವತ್ತು ಕೊಡುತ್ತೇವೆ, ನಾಳೆ ಕೊಡುತ್ತೇವೆ ಎಂದು ಎಷ್ಟು ಪ್ರಶ್ನೆಗಳನ್ನು ಮುಂದೆ ಹಾಕಿದ್ದೀರಿ. ತಾವೇ ನೋಡಿ. ಕ್ವೆಶ್ಚನ್ ಕೇಳುವವರು ಮತ್ತು ಉತ್ತರ ಹೇಳುವವರು ಇವರಿಬ್ಬರಿಗೇ ಕೆಲವು ಸಾರಿ ಸೀಮಿತವಾಗಿ ನಿಮಗೆ ಆಮೇಲೆ ಉತ್ತರ ಕಳುಹಿಸಿಕೊಡುತ್ತೇವೆ. ನಾಳೆ ಕೊಡುತ್ತೇವೆ, ಟೇಬಲ್ ಮೇಲೆ ಇಡುತ್ತೇವೆ ಎಂದು ಹೇಳುವುದು ಪರಿಪಾಠವಾಗಿದೆ. ಕ್ವೆಶ್ಚನ್ ಲೇಡ್ ಆದ ಮೇಲೆ ಅದು ಹೌಸಿನ ಸ್ವತ್ತು. ಎಲ್ಲರಿಗೂ ವಿಷಯ ತಿಳಿದುಕೊಳ್ಳುವುದಕ್ಕೆ ಅವಕಾಶ ಇರುತ್ತದೆ. ಆಮೇಲೆ ಕಳುಹಿಸಿಕೊಡುತ್ತೇವೆ, ಟೇಬಲ್ ಮೇಲಿಡುತ್ತೇವೆ ಎಂದರೆ ಆಮೇಲೆ ಕೇಳಬೇಕಾ? ೬ ತಿಂಗಳಿಗೆ ಒಂದು ಸಾರಿ ಅಸೆಂಬ್ಲಿ ಕರೆಯುತ್ತಾರೆ. ಸ್ಯಾಟಿಸ್ಫಾಕ್ಷನ್ ಇದನ್ನು ಪೂರೈಸುವುದಕ್ಕೆ. ಅದಕ್ಕಾಗಿ ೮ ದಿವಸದ ಸೆಕ್ಷನ್ ಕರೆದಿದ್ದೀರಿ ಎಂದು ಅವರಿಗೂ ಗೊತ್ತು, ನಮಗೂ ಗೊತ್ತು. ಎಲ್ಲರಿಗೂ ಗೊತ್ತು ಪ್ರಶ್ನೆಗೆ ಉತ್ತರ ಬರದಿದ್ದರೆ ರೂಲ್ಸ್ ರೆಗ್ಯುಲೇಷನನ್ನು ಬುದ್ಧಿ ನಮಗೆ ಈ ವಯಸ್ಸಿನಲ್ಲಿ ಹೇಳುವುದಕ್ಕೆ ಬಂದರೆ ಇದು ಸರಿಯಲ್ಲ ಬೊಮ್ಮಾಯಿಯವರೇ.

ಶ್ರೀ ಎಸ್. ಆರ್. ಬೊಮ್ಮಾಯಿ ಕಳಿಯ ಸದಸ್ಯರೂ ಮಾಜಿ ಸಭಾಧ್ಯಕ್ಷರೂ ಆಗಿರುವ ತಾವು ಹೇಳಿದ ಹಾಗೆ ನಾವು ಪ್ರಶ್ನೆಗೆ ಉತ್ತರ ಕೊಡಬೇಕು, ಕೊಡುತ್ತಿದ್ದೇವೆ. ಕೊಡದಿದ್ದರೆ ಉತ್ತರ ಮನೆಯಲ್ಲಿ ಬರದಿದ್ದರೆ ಕೂಡಲೇ ಸಂಬಂಧಪಟ್ಟವರನ್ನು ಕೊಠಡಿಯಲ್ಲಿ ಕರೆದು ಸರ್ಕಾರ ಉತ್ತರ ಕೊಡುವ ವ್ಯವಸ್ಥೆ ಮಾಡಬೇಕು. ಇಲ್ಲಿ ಚರ್ಚೆ ಮಾಡಿ ಸಮಯ ಕಳೆಯುವುದು ಸರಿಯಲ್ಲ. ಆ ಕಡೆಯೂ ನೋಡಬೇಕು. ಈ ಕಡೆಯೂ ನೋಡಬೇಕು. ಆದರೆ ಪ್ರಶ್ನೋತ್ತರ ಕಾಲದಲ್ಲಿ ಚರ್ಚೆ ಆಗಬಾರದು. ಸದಸ್ಯರು ಸಹಕಾರ ಮಾಡದಿದ್ದರೆ ಕಷ್ಟವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್—ಕ್ವೆಶ್ಚನ್ ಅವರ್‌ನಲ್ಲಿ ಯಾರೂ ಚರ್ಚೆ ಮಾಡುವುದಕ್ಕೆ ಹೋಗಲಿಲ್ಲ. ಈ ಕಡೆಯವರಾಗಲೀ ಆ ಕಡೆಯವರಾಗಲೀ ಕ್ವೆಶ್ಚನ್ ಅವರ್‌ನಲ್ಲಿ ಚರ್ಚೆ ಮಾಡುವುದಕ್ಕೆ ಹೋಗಲಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಿನ್ನೆ ಪಾಯಿಂಟ್ ಆಫ್ ಆರ್ಡರ್...

ಶ್ರೀ ಎಂ. ಎಸ್. ಕೃಷ್ಣನ್.—ಪಾಯಿಂಟ್ ಆಫ್ ಆರ್ಡರ್ ಏತಕ್ಕೆ ಬರುತ್ತದೆ ? ಉತ್ತರವೇ ಬರದೇ ಹೋದರೆ ಪಾಯಿಂಟ್ ಆಫ್ ಆರ್ಡರ್ ಬರುತ್ತದೆ. ಸಮಂಜಸವಾಗಿ ಉತ್ತರ ಕೊಡದೇ ಇದ್ದಾಗ ಪಾಯಿಂಟ್ ಆಫ್ ಆರ್ಡರೂ ಬರುತ್ತದೆ, ಎಲ್ಲವೂ ಬರುತ್ತದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಕೃಷ್ಣನ್ ಅವರಿಗೆ ಇರುವ ಅನುಭವ ಯಾರಿಗೂ ಇಲ್ಲ. ಕ್ವೆಶ್ಚನ್ ಅವರ್‌ನಲ್ಲಿ ಪಾಯಿಂಟ್ ಆಫ್ ಆರ್ಡರ್ ಇದೆ ಎಂದು ಹೇಳಿದಮೇಲೆ...

ಶ್ರೀ ಎಂ. ಎಸ್. ಕೃಷ್ಣನ್.—ನಮಗೂ ಗೊತ್ತಿದೆ. ರೂಲ್ಸ್ ಹೇಳಿಕೊಡಬೇಕಾಗಿಲ್ಲ. ಪ್ರಶ್ನೆ ಅದಲ್ಲ. ಅವರು ಸರಿ ಮಾಡಿಕೊಳ್ಳುವುದು ಬಿಟ್ಟು ನಮಗೇ ಹೇಳಿದರೆ...

(ಗೊಂದಲ)

ಅಧ್ಯಕ್ಷರು:—ಕೂಡ್ರಿ.

ಶ್ರೀ ಎಂ. ಎಸ್. ಕೃಷ್ಣನ್.—ಈ ಮನೆಯ ಆ ಕಡೆ ಸದಸ್ಯರು, ಈ ಕಡೆ ಸದಸ್ಯರು ತಾವು ಸೇರಿ ಕ್ವೆಶ್ಚನ್ ಅವರ್‌ನಲ್ಲಿ ಯಾವರೀತಿ ಮಾಡಬಹುದು ಎಂಬ ಬಗ್ಗೆ ಚರ್ಚೆ ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ವಿಚಾರ ಮಾಡೋಣ ಕಂಳಿತುಕೊಳ್ಳಿ. ದಯವಿಟ್ಟು ಕೂಡ್ರಿ.

ಶ್ರೀ ಆರ್. ವೆಂಕಟರಾಮಯ್ಯ.—ಅಸೆಂಬ್ಲಿ ಆದ ಮೂರು ತಿಂಗಳಾದರೂ...

ಅಧ್ಯಕ್ಷರು.—ವೆಂಕಟರಾಮಯ್ಯನವರೇ, ರೂಲ್ಸ್ ರೆಗ್ಯುಲೇಷನ್ ಗೊತ್ತಿಲ್ಲದೇ ತಾವು ಹಾಗೆ ಮಾತನಾಡಬೇಡಿ.

ಶ್ರೀ ಆರ್. ವೆಂಕಟರಾಮಯ್ಯ.—ಅಲ್ಲಿ, ನಾನು ಹೇಳೋದು ಅಸೆಂಬ್ಲಿ ಶುರು ಆಗಿ ಮೂರು ತಿಂಗಳಿಗೆ ಈಗ ಆನ್‌ಸರ್ ಬರುತ್ತಾ ಇದೆ. ಇದು ಸರಿಯಲ್ಲ. ನಾವು ೧೫ ದಿವಸ ಟೈಂ ಕೊಡುತ್ತೇವೆ. ಆದರೂ ಉತ್ತರ ಬರದೇ ಇದ್ದರೆ ಹೇಗೆ ? ಹೋದ ಅಸೆಂಬ್ಲಿ ಆದಮೇಲೆ ೮ ದಿವಸಕ್ಕೆ ಒಂದೊಂದು ಆನ್‌ಸರ್ ಬರುತ್ತಿದೆ, ನಾವು ಕೇಳುವ ಉದ್ದೇಶ ಏನು ? ವಿವರ ಸಿಗದಿದ್ದರೆ ಅರ್ಧ ಗಂಟೆ ಚರ್ಚೆ ಹಾಕಬಹುದು. ಅದು ಬಿಟ್ಟು ೧೫ ದಿವಸ ಟೈಂ ಕೊಟ್ಟರೂ ದಿನವೂ ಉತ್ತರ ಕೊಡದೇ ಇರುವುದು ಅನ್ಯಾಯ. ಇದು ನ್ಯಾಯವಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ...

ಅಧ್ಯಕ್ಷರು.—ದಯವಿಟ್ಟು ಕೂಡ್ರಿ. ಮಂಜಕ್ಕಾಯ ಮಾಡೋಣ. ಬಂಗಾರಪ್ಪನವರೇ ನನಗೆ ಪಕ್ಷಪಾತ ಏನೂ ಇಲ್ಲ. ನೀವು ೨೨೪ ಜನ ಸರ್ವಾನುಮತದಿಂದ ಇಲ್ಲಿ ಕೂರಿನಿದ್ದೀರಿ ಎಂದು ನಾನು ಕೂತಿದ್ದೇನೆ. ತಿಳಿಯಿತಾ ? ನನಗೆ ಇದಕ್ಕಿಂತ ಅಲ್ಪೇ (ಸದಸ್ಯನಾಗಿರುವುದಕ್ಕೆ) ಹೆಚ್ಚು ಇಂಟರೆಸ್ಟ್. ನಾನೂ ಎಂ.ಎಲ್.ಎ. ಇದ್ದಾಗ ನಿಮ್ಮೆಲ್ಲರಿಗಿಂತ ಹೆಚ್ಚಿನ ಪ್ರಶ್ನೆಗಳನ್ನು ನಾನು ಹಾಕಿದ್ದೇನೆ. ಎಲ್ಲರೂ ಸರ್ವಾನುಮತದಿಂದ ಕೂರಿಸಿದ್ದೀರಿ ಎಂದು ಕೂತಿದ್ದೇನೆ. ನಿಮ್ಮೆಲ್ಲರ ಹಕ್ಕನ್ನು ಕಾಪಾಡುವುದು, ನಿಮಗೆ ಅವಕಾಶ ಕೊಡುವುದು ನನ್ನ ಕರ್ತವ್ಯ ಎಂದು ತಿಳಿದಿದ್ದೇನೆ. ಇಲ್ಲಿಯವರೆಗೆ ನಾನೂ ಪಕ್ಷಪಾತ ಮಾಡಿಲ್ಲ. ನಿಮಗೂ ಪಕ್ಷಪಾತ ಮಾಡಿಲ್ಲ. ಅವರಿಗೂ ಪಕ್ಷಪಾತ ಮಾಡಿಲ್ಲ. ಮಾಡುವಂತಹ ವಿಚಾರವೂ ಇಲ್ಲ. ೧೨ ಗಂಟೆ ಪ್ರಶ್ನೋತ್ತರ ಕಾಲ ಮುಗಿದರೂ ಕೂಡ ಲ್ಯಾಪ್ಸ್ ಮಾಡಬಾರದು ಎಂದು ಈ ಕಡೆ ಸದಸ್ಯರಿಗೂ ಆ ಕಡೆ ಸದಸ್ಯರಿಗೂ ಅವಕಾಶ ಮಾಡಿಕೊಡುವ ದೃಷ್ಟಿಯಿಂದ ಎಲ್ಲ ಪ್ರಶ್ನೆಯನ್ನೂ ತೆಗೆದುಕೊಂಡಿದ್ದೇನೆ. ಬಂಗಾರಪ್ಪನವರು ತಾವು ಲೇಟಾಗಿ ಬಂದಿರಿ. ಕೃಷ್ಣನ್ ಯಾರು ಹಾಕಿದ್ದಾರೆ ಅವರು ಮೊತ್ತ ಆದಷ್ಟು ಉಪಪ್ರಶ್ನೆ ಕೇಳಲಿ, ಮತ್ತೆ ಬೇರೆಯವರು ಯಾರು ಬೇಡ ಎಂದು ಈ ಕಡೆಯವರಿಗೆ, ಆ ಕಡೆಯವರಿಗೆ ಹೇಳಿದ್ದೇನೆ. ಅದು ತಮಗೆ ಗೊತ್ತಿಲ್ಲ, ಗೊತ್ತಿದ್ದರೆ ತಾವು ಈ ಪ್ರಶ್ನೆ ಕೇಳುತ್ತಾ ಇರಲಿಲ್ಲ. ಇದಕ್ಕೆ ಈ ಕಡೆಯವರೂ ಒಪ್ಪಿದ್ದರು. ಆ ಕಡೆಯವರೂ ಒಪ್ಪಿದ್ದರು. ಆದರ ಪ್ರಕಾರ ನಾವು ನಡೆದುಕೊಳ್ಳುತ್ತಾ ಬಂದಿದ್ದೇವೆ. ಬಸವಲಿಂಗಪ್ಪನವರು ಕೃಷ್ಣನ್ ಅವದಿ ಮುಗಿದಮೇಲೆ ೨ ಕೃಷ್ಣನ್‌ಗೆ ೧೦ ಮಿನಿಟ್ ತೆಗೆದುಕೊಂಡಿದ್ದಾರೆ. ಮೊದಲನೇ ಪ್ರಶ್ನೆಗೆ ೫ ಮಿನಿಟ್ ತೆಗೆದುಕೊಂಡಿದ್ದಾರೆ. ಎರಡನೇ ಪ್ರಶ್ನೆಗೂ ೫ ಮಿನಿಟ್ ತೆಗೆದುಕೊಂಡಿದ್ದಾರೆ. ಆಯಿತಾ ? ತೆಗೆದುಕೊಳ್ಳಲಿ. ಅವರು ಅನುಭವಸ್ಥರಿದ್ದಾರೆ, ಇವರೂ ಉತ್ತರ ಹೇಳಲಿ ಎಂದು ಅವಕಾಶ ಮಾಡಿಕೊಟ್ಟಿದ್ದೇನೆ. ಈ ದೃಷ್ಟಿಯಿಂದ ನೀವು ಕೂತಿದ್ದರೆ ನಿಮಗೆ ಹೇಳುತ್ತಿದ್ದೆ. ಬೇರೆಯವರಿಗೆ ಅವಕಾಶ ಮಾಡಿಲ್ಲ ಬಂಗಾರಪ್ಪನವರೇ, ನೀವು ಲೇಟಾಗಿ ಬಂದಿರಿ, ಪೊದಲಾಗಿದ್ದರೆ ನಿಮಗೆ ಟ್ರೀಟ್ ಇತ್ತು ಎಂದು ಹೇಳುತ್ತಿದ್ದೆ. ಆದರೆ ತಾವು ಕೂರಲಿಲ್ಲ. ಎದ್ದು ಕೇಳಿದಿರಿ. ಮಂತ್ರಿಗಳು ಉತ್ತರ ಹೇಳಿದರು. ನಿಮಗೆ ಅವಕಾಶ ಕೊಡಬಾರದು ಎಂದು ನಾನು ಹೇಳಿಲ್ಲ. ಒಂದು ಕಂಡೀಷನ್ ಏನು ಕಾಕಿದೆ ಎಂದು ಕೃಷ್ಣನ್ ಹಾಕಿದವರು ಬಿಟ್ಟು ಬೇರೆ ಯಾರೂ ಕೇಳತಕ್ಕದ್ದಲ್ಲ ಎಂದು ಇಡೀ ಸದನ ಒಪ್ಪಿದಮೇಲೆ ಅದರಂತೆ ಮಾಡಿದ್ದೇನೆ. ಈ ಹಿನ್ನೆಲೆಯಲ್ಲಿ ಅವಕಾಶ ಕೊಟ್ಟಿಲ್ಲವೇ ಹೊರತು ನನಗೆ ನನಗೆ ಅವರ ಮೇಲೂ ಗೌರವ ಐತಿ. ಇವರ ಮೇಲೂ ಗೌರವ ಐತಿ. ೨೨೪ ಜನರ ಮೇಲೂ ಅಪಾರವಾದ ಗೌರವ ನನ್ನದೈತಿ. ಯಾರಿಗೂ ತೊಂದರೆ ಕೊಡಬೇಕು ಎಂಬ, ಅಥವಾ ಅವಕಾಶ ಮೊಟಕು ಮಾಡಬೇಕು ಎಂಬ ಉದ್ದೇಶ ನನಗಿಲ್ಲ ಅವಕಾಶ ಹೆಚ್ಚು ಮಾಡಿಕೊಡಬೇಕೆಂಬುದೇ ನನ್ನ ಉದ್ದೇಶ. ಈಗ ವಿಷಯ ಹಿಂಳಿಕರ ಪ್ರಕಾರ ಜೀರೋ ಆವರ್ ಹೋಗಿ ಶ್ರೀ ಜೀರೋ ಆವರ್ ಆಗಿದೆ. ೨೦–೩೦ ಗಂಟೆ ಅವಕಾಶ ಕೊಟ್ಟಿದ್ದೇನೆ. ಏತಕ್ಕೆ ? ನಿಮ್ಮೆಲ್ಲರಿಗೂ ಉತ್ತರ ಸಿಗಲಿ ಎಂದು. ನಿನ್ನೆ ನಿಯಮ ೫೬ಳಕ್ಕೆ ಸಿಸ್ಪಮ್ಯಾಟಿಕ್ಕಾಗಿ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈಗಲೂ ಹೇಳ್ದೇನೆ. ಬೆಳಿಗ್ಗೆ ಸಹ ಛೇಂಬರ್‌ನಲ್ಲಿ ಮಂತ್ರಿಗಳಿಗೆ ಸರಿಯಾಗಿ ಉತ್ತರ ಕೊಡಿ, ಸರಿಯಾಗಿ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ನಿಮಗೆ ಅಗೌರವ ಮಾಡಬೇಕಂ, ನಿಮಗೆ ಅವಕಾಶ ಕೊಡಬಾರದು, ಅವರಿಗೆ

ಅವಕಾಶ ಕೊಡಬೇಕು ಎಂಬ ದೃಷ್ಟಿ ನನ್ನಲ್ಲಿ ಯಾವತ್ತೂ ಇಲ್ಲ. ಹಿಂದೆಯೂ ಮಾಡಿಲ್ಲ. ಮುಂದೆಯೂ ಮಾಡುವುದಕ್ಕೆ ಸಾಧ್ಯವಿಲ್ಲ. ೧೦ ನಿಮಿಷ ಯಜಮಾನರಿಗೆ ಅವಕಾಶ ಕೊಟ್ಟಿದ್ದೇನೆ. ಆದ್ದರಿಂದ ಈಗ ಮುಂದೆ ಹೋಗೋಣ. ಈಗ ದೊಡ್ಡಮೇಟಿ ಅವರನ್ನು ಕರೆದಿದ್ದೇನೆ. ಅವರು ಹೇಳಲಿ. ಅಲ್ಲಿಗೆ ಎಲ್ಲಾ ಮುಕ್ತಾಯ ಮಾಡೋಣ.

ಶ್ರೀ ಜ್ಞಾನದೇವ ದೊಡ್ಡಮೇಟಿ,—ನಾನು ೩೧೨ನೇ ಪ್ರಶ್ನೆ ಕೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ಪ್ರಶ್ನೆಗೆ ಉತ್ತರ ಹೇಳುತ್ತೇನೆ ಸ್ವಾಮಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ...

ಅಧ್ಯಕ್ಷರು.—ನಜೀರ್ ಸಾಹೇಬರೇ ಒಂದು ಮಿನಿಟ್.

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರೇ, ತಾವು ದಯಮಾಡಿ ಕುಳಿತ್ತುಕೊಳ್ಳಿ, ನಾನು ಹೇಳಿದ್ದ ನಿಮಗೆ ಕನ್ಫ್ಯೂಸ್ ಆಗಿದೆಯೋ ಇಲ್ಲವೊ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ ನಾನು ಬರುವುದಕ್ಕಿಂತಲೂ ಮೊದಲು ಯಾವ ತೀರ್ಮಾನ ತೆಗೆದುಕೊಂಡಿದ್ದಿರಿ ಎಂಬುದು ನಮಗೆ ಗೊತ್ತಿರಲಿಲ್ಲ. ಪ್ರಶ್ನೋತ್ತರ ಸಮಯದಲ್ಲಿ ಬೇರೆ ಸದಸ್ಯರು ಉಪಪ್ರಶ್ನೆ ಕೇಳಬಾರದೆಂಬುದು ನಮಗೆ ಗೊತ್ತಿರಲಿಲ್ಲಿ. ಈ ವಿಚಾರ ಹೊಸದಾಗಿ ಬಂತು...

ಅಧ್ಯಕ್ಷರು.—ಇದನ್ನು ಇಲ್ಲಿಗೇ ಮುಕ್ತಾಯ ಮಾಡೋಣ. ದಯವಿಟ್ಟು ಕೂಡಿ.

(ಗೊಂದಲ)

ನಾನು ತಮಗೆ ಉತ್ತರವನ್ನು ಕೊಟ್ಟಿದ್ದೇನೆ. ದಯವಿಟ್ಟು ಕೂಡಿ. (ಗೊಂದಲ) ಬಸವಲಿಂಗಪ್ಪನವರೇ ತಾವೂ ದಯವಿಟ್ಟು ಕಳಿತುಕೊಳ್ಳಿ. ತಾವು ಹಿರಿಯರಿದ್ದೀರಿ. ಮುಂದಿನ ಮಾತು ಬೇಡ. (ಗೊಂದಲ) ನಾನು ಉತ್ತರ ಕೊಟ್ಟಿದ್ದೇನೆ. (ಗೊಂದಲ) ಬಸವಲಿಂಗಪ್ಪನವರೇ ತಾವು ದಯವಿಟ್ಟು ಕುಳಿತುಕೊಳ್ಳಿ, ಮುಂದೆ ಬೇಕಾದಷ್ಟು ಅವಕಾಶಗಳು ಇವೆ. ಆಗ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಯಾವ ರೀತಿ ಮಾಡಿಕೊಡುತ್ತೀರಿ ? ಯಾವ ವಿಚಾರಕ್ಕೆ ಕೊಡುತ್ತೀರಿ ?

ಅಧ್ಯಕ್ಷರು.—ಅವಕಾಶ ಮಾಡಿಕೊಡುತ್ತೇನೆ. ತಾವು ದಯವಿಟ್ಟು ಕೂಡಿ. (ಗೊಂದಲ) ತಾವು ಕುಳಿತುಕೊಳ್ಳುತ್ತೀರೋ ಇಲ್ಲವೊ ? (ಗೊಂದಲ) (ಗೊಂದಲ) ನೀವು ಮಾತನಾಡಿದ್ದೀರಿ. ನಾವು ಉತ್ತರ ಹೇಳಿಯಾಗಿದೆ. ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಎಸ್. ಬಂಗಾರಪ್ಪ.—ನಾವು ಹೇಳಬೇಕಂ.

ಅಧ್ಯಕ್ಷರು.—ನೀವು ಹೇಳುವುದು ಬೇಡ. ಹಿನ್ನೆಲೆ ಏನೆಂದು ಹೇಳಿದ್ದೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜೆ. ನಾರಾಯಣಸ್ವಾಮಿ—ಅಧ್ಯಕ್ಷರೇ...(ಗೊಂದಲ)

ಅಧ್ಯಕ್ಷರು.—ಈಗ ದೊಡ್ಡಮೇಟಿಯವರು ತಮ್ಮ ಪ್ರಶ್ನೆ ಕೇಳಲಿ,

ಧಾರವಾಡ ಜಿಲ್ಲೆಯಲ್ಲಿ 'ಪಕ್ಸ್' ಮಂಡಳಿಗಳ ಹಣ ದುರುಪಯೋಗ ಹಾಗೂ ಅವ್ಯವಹಾರಗಳ ಬಗ್ಗೆ

೩೧೨. ಶ್ರೀ ಜ್ಞಾನದೇವ ದೊಡ್ಡಮೇಟಿ.— ಗ್ರಾಮಿಣಾಭಿವೃದ್ಧಿ, ಪಂಚಾಯತ್ ರಾಜ್ ಪಕ್ಸ್ ಮತ್ತು ಗೃಹ ನಿರ್ಮಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿ 'ಪಕ್ಸ್' ಮಂಡಳಿಗಳ ಹಣ ದುರುಪಯೋಗ ಹಾಗೂ ಅವ್ಯವಹಾರಗಳ ಪ್ರಕರಣಗಳೆಷ್ಟು (ತಾಲ್ಲೂಕುವಾರು ಮಾಹಿತಿ)